ಗಮನ ಸೆಳೆಯುವಂತೆ ಸೂಚನೆ

1 ಗುಲ್ಬರ್ಗ ಜಿಲ್ಲೆಯ ಕಾದಿಟ್ಟ ಪೋಲೀಸ್ ಶಸ್ತ್ರಾಧಾರರಿಂದ ಕಾಣೆಯಾಗಿರುವ 16 ರಿವಾಲ್‌ವಾರ್‌ಗಳ ಬಗ್ಗೆ.

ಶ್ರೀ ಎಸ್.ಕೆ. ಕಾಂತಾ (ಗುಲ್ಬರ್ಗ).—ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ಜಿಲ್ಲೆಯ ಕಾದಿಟ್ಟ ಪೋಲೀಸ್ ಶಸ್ತ್ರಾಗಾರದಿಂದ ಕಾಣೆಯಾಗಿರುವ ೧೬ ರಿವಾಲ್‌ವಾರ್‌ಗಳ ಬಗ್ಗೆ ಗೃಹ ಸಚಿವರ ಗಮನ ವನ್ನು ಸೆಳೆಯಬಯಸುತ್ತೇನೆ.

ಶ್ರೀ ಬಿ. ರಾಚಯ್ಯ (ಗೃಹ ಸಚಿವರು).—ಮಾನ್ಯ ಅಧ್ಯಕ್ಷರೆ, ನಾನು ಈ ಹೇಳಿಕೆಯನ್ನು ಮಾಡ ಬಯಸುತ್ತೇನೆ.

ಗುಲ್ಬರ್ಗಾ ಜಿಲ್ಲಾ ಸಶಸ್ತ್ರ ಕಾದಿಟ್ಟ ದಳದ ಸಂಗ್ರಹಗಾರದಿಂದ ಕೆಲವು ಆಯುಧಗಳು ಕಾಣೆಯಾಗಿವೆ ಎಂಬ ಸಂಬಲರ್ಹ ವರದಿಯೊಂದು ಗುಲ್ಬರ್ಗಾ ಜಿಲ್ಲೆ ಆರಕ್ಷಣಾಧೀಕ್ಷಕರಿಗೆ ೧೯೮೫ರ ಏಪ್ರಿಲ್ ಮಾಹಿ ಯಲ್ಲಿ ಬಂದಿತು. ಇದರ ಬಗ್ಗೆ ಕೇಂದ್ರ ಕಚೇರಿ ಆರಕ್ಷಕ ಉಪ ಅಧೀಕ್ಷಕರಿಗೆ ಆಯುಧ ಸಂಗ್ರಹಾ ಗಾರದಲ್ಲಿ ಖುದ್ದಾಗಿ ವಿಚಾರಣೆ ನಡೆಸಲು ಆದೇಶವನ್ನು ನೀಡಲಾಯಿತು. ವಿಚಾರಣೆ ಮಾಡುವ ಕಾಲದಲ್ಲಿ ೩ ಎಸ್.ಡಿ.ಬಿ.ಎಲ್, ಬಂದೂಕುಗಳು ಮತ್ತು ೩ ರಿವಲ್ವಾರ್‌ಗಳು (ಪಶಪಡಿಸಿ ಮಂಟ್ಟು ಗೋಲು ಹಾಕಿಕೊಂಡು ಇಟ್ಟಿರುವ) ಕಾಣೆಯಾಗಿರುವುದಂ ಬೆಳಕಿಗೆ ಬಂದಿತು. ಗುಲ್ಬರ್ಗಾ ಜಿಲ್ಲಾ ಕಾದಿಟ್ಟ ಮುಖ್ಯ ಪೇದೆ ಶ್ರೀ ರಾಮಂರಾವ್ ಎಂಬುವರಿಗೆ ಶಸ್ತ್ರಾಗಾರದ ಮೇಲ್ವಿಚಾರಣೆಯ ಜವಾಬ್ದಾರಿ ಯನ್ನು ಪಹಿಸಲಾಗಿತ್ತು.

೨ ಗುಲ್ಬರ್ಗಾ ಆರಕ್ಷಣಾಧೀಕ್ಷಕರ ಆದೇಶದ ಮೇರೆಗೆ ಬ್ರಹ್ಮಾಪುರ ಪೋಲೀಸ್ ಠಾಣೆ ಅಪರಾಧ ಸಂಖ್ಯೆ.. ೧೬೫/೮೫ನ್ನು ಐ.ಪಿ.ಸಿ. ೪೧೯ರ ಮೇರೆಗೆ ದಿನಾಂಕ ೨೪-೪-೮೫ ರಂದು ಒಂದು ಮೊಕದ್ದಮೆ ದಾಖಲು ಮಾಡಿಕೊಂಡು ಮುಂದಿನ ತನಿಖೆಯನ್ನು ನಡೆಸಲಾಯಿತು. ಸಂಬಂಧಿಸಿದ ಮುಖ್ಯ ಪೇದೆ ರಾಮಂರಾವ್ ಮತ್ತು ಮಧ್ಯಸ್ಥಗಾರನಾದ ಹನುಮಂತರಾವ್ ಹಟ್ಟಿ ಎಂಬುವವರನ್ನು ದಸ್ತಗಿರಿ ಮಾಡಿ ೬ ಆಯುಧಗಳನ್ನೂ ಗುಲ್ಬರ್ಗಾ ನಗರ ಮತ್ತು ಹೈದರಾಬಾದ್ ನಗರಗಳಲ್ಲಿಪಶಪಡಿಸಿಕೊಳ್ಳಲಾಯಿತು.

೩ ತನಿಖೆ ನಡೆಯುತ್ತಿರುವಾಗ ೧೯೮೦ರಲ್ಲಿ ರಕ್ಷಿಸಿಡಲಾಗಿದ್ದ ಇನ್ನೂ ಎರಡು ಬಂದೂಕುಗಳು ಕಾಣೆಯಾಗಿರುವುದು ಬೆಳಕಿಗೆ ಬಂದಿತು. ಅವುಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳದೇ ಇರುವುದು ಕಂಡು ಬಂದಿತು ಅವುಗಳನ್ನು ವಶಪಡಿಸಿಕೊಳ್ಳುವ ಪ್ರಯತ್ನ ಇನ್ನೂ ನಡೆಯುತ್ತಿದೆ. ಇಷ್ಟರಲ್ಲೇ ದೋಷಾ ರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು ಎಂದು ವರದಿಯಾಗಿದೆ,

೪ ಆರೋಪಿ ಮುಖ್ಯ ಪೇದೆ ರಾಮರಾವ್ ಎಂಬುವವರ ಅಧಿಕಾರ ದುರುಪಯೋಗ ಮೇಲ್ನೋಟಕ್ಕೆ ಸಾಬೀತಾಗಿದ್ದು ಅವರನ್ನು ಅಮಾನತ್ತಿನಲ್ಲಿರಿಸಿ, ಇಲಾಖಾ ವಿಚಾರಣೆಯನ್ನು ನಡೆಸಲು ದಿನಾಂಕ ೨೨-೪-೮೫ ರಂದು ಆದೇಶ ನೀಡಲಾಗಿದೆ. ಇಲಾಖಾ ವಿಚಾರಣೆ ನಡೆಯುತ್ತಿದೆ.

ಶ್ರೀ ಎಸ್.ಕೆ. ಕಾಂತಾ.—ಇದು ಬೆಳಕಿಗೆ ಬಂದದ್ದು ಏಪ್ರಿಲ್ ೧೯೮೫ರಲ್ಲಿ ಬಂದೂಕುಗಳ ಕಳವು ಆಗಿರತಕ್ಕದ್ದು ೧೯೮೪ರಲ್ಲಿ. ಆದರೆ ಪ್ರಶ್ನೆ ಯಾವಾಗ ಬಂತು ಅಂದರೆ ೧೬ ರಿವಾಲ್‌ವಾರ್‌ಗಳ ಕಳವು ಆದಮೇಲೆ ಬಂದಿದೆ. ೧೬ ಮಾತ್ರ ಹೋಗಿವೆಯೇ ಅಥವಾ ಇನ್ನೂ ಜಾಸ್ತಿ ಹೋಗಿವೆಯೆ? ಇದರ ಬಗ್ಗೆ ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ೯-೭-೧೯೮೫ರಲ್ಲಿ ಟೈಂಸ್ ಪತ್ರಿಕೆಯಲ್ಲಿ ಈ ರೀತಿ ಬರೆದಿದ್ದಾರೆ.

ARMS STOLEN

Sir, This is with reference to the report under the heading "Arms Stolen From Reserve Police" (The Times, June 27), Since the report is not factual, the following clarification is issued.

In every district a place known as "arms dump" is maintained for the safe custody of weapons which are confiscated by the government or deposited by licence-holders themselves for various reasons. These weapons are not issued to police officers to be used in the performance of their official duties.

A few months back the Superintendent of Police, Gulbarga, had reasons to believe that the "arms dump" was not being maintained properly. He, therefore, ordered a thorough physical verification of all weapons there. During the exercise it was noticed that three revolvers and three single barrel guns were missing. An enquiry was held and it was learnt that a head constable, who was entrusted with safe custody of the arms, was responsible for this loss. He is not a sentry of "bell of arms", as alleged. The Superintendent of Police subsequently ordered registration of a criminal case against the concerned. A criminal case was registered at the Brahmapur police station, Gulbarga.

During investigation it was brought to light that the head constable had sold the weapons to someone in Gulbarga, Both the head constable and the person who allegedly purchased weapons were arrested to judicial custody. All the weapons were recovered from various places. The concerned persons are being charge sheeted soon. A separate departmental inquiry has been ordered and the head constable has been placed under suspension.

In view of the above, it is incorrect to say that 16 revolvers were stolen and the head constable sold the weapons to various parties.

All six weapons were purchased by only one person. It is not a fact that the superintendent of police "did not realise that arms were missing." In fact the case was brought to light because of his efforts. It is also false to say that no case has been booked against the alleged mediator. The transaction has not taken place over a period of one year but over two years 1982-83

ಅಧ್ಯಕ್ಷರೆ.—ನೀವು ಮಂತ್ರಿಗಳ ಹತ್ತಿರ ಕುಳಿತು ಚರ್ಚೆ ಮಾಡಿ. ಈ ರೀತಿ ಪತ್ರಿಕೆಯಲ್ಲಿ ಬಂದಿರುವುದನ್ನು ತಂದು ಓದುವುದು ಸರಿಯಲ್ಲ.

ಶ್ರೀ ಎಸ್. ಕೆ. ಕಾಂತಾ.—ಪೋಲೀಸರ ಆಲಕ್ಷ್ಯದಿಂದ ರಿವಾಲ್ವಾರ್ ಮತ್ತು ಪಿಸ್ತೂಲುಗಳು ಕಳುವಾಗಿವೆ. ಬೇರೆಯೇ ಹೊಲ ಮೇಯ್ದರೆ.....

ಅಧ್ಯಕ್ಷರು.—ನೀವು ನೇರವಾಗಿ ವಿವರಣೆ ಕೇಳಿ. ನಿಮ್ಮ ಹತ್ತಿರ ವಿವರಗಳಿದ್ದರೆ ಮಂತ್ರಿಗಳ ಕಡೆ ಕೊಡಿ.

ಶ್ರೀ ಎಸ್. ಕೆ ಕಾಂತಾ.—ಜನರನ್ನು ಸಂರಕ್ಷಣೆ ಮಾಡುವ ಜನ ಪೋಲೀಸರು. ಈ ಪ್ರಶ್ನೆ ಯಾವಾಗ ಬಂತು ಎಂದರೆ ದಿನಾಂಕ ೭-೬-೧೯೮೫ರ ಟೈಮ್ಸ್ ಪತ್ರಿಕೆಯಲ್ಲಿ 'Arms Stolen' ಎಂದು ಕೇಳಿದಾಗ ಉತ್ತರ ಹೇಗೆ ಬಂತು ಎಂದರೆ...

ಅಧ್ಯಕ್ಷರು.—ಕ್ವಾರಿಫಿಕೇಷನ್ ನೇರವಾಗಿ ಕೇಳಿ. ನಿಮಗೆ ಕ್ವಾರಿಫಿಕೇಷನ್ ಅಂದರೆ ಗೊತ್ತಿಲ್ಲವೆ ?

ಶ್ರೀ ಎಸ್. ಕೆ. ಕಾಂತಾ.—ಅದನ್ನೇ ಕೇಳುತ್ತಿದ್ದೇನೆ. ತಪ್ಪು ಗಮನಕ್ಕೆ ಇದರ ಪ್ರಾಮುಂಖ್ಯತೆಯನ್ನು ತರಂತ್ತಿದ್ದೇವೆ.

ಅಧ್ಯಕ್ಷರು. —ನನಗೆ ಅದರ ಪ್ರಾಮುಂಖ್ಯತೆ ಗೊತ್ತಾಗಿದೆ.

ಶ್ರೀ ಎಸ್. ಕೆ. ಕಾಂತಾ.—ನಾನು ಕೇಳತಕ್ಕದ್ದು ರಿವಾಲ್ವಾರ್ ಮತ್ತು ಪಿಸ್ತೂಲುಗಳು ಏನು ಕಳುವಾಗಿವೆ ಅದು ಆಕ್ಚುಯಲಿ.....

ಅಧ್ಯಕ್ಷರು.—ನೀವು ಕೂಡ್ರಿ. ಮಂತ್ರಿಗಳು ಉತ್ತರ ಹೇಳುತ್ತಾರೆ.

ಶ್ರೀ ಎಸ್. ಕೆ. ಕಾಂತಾ.—ಎರಡೂ ಮೂರು ಸಾರಿ.....

ಅಧ್ಯಕ್ಷರು.—ನೀವು ಮಂತ್ರಿಗಳ ಚೇಂಬರ್‌ಗೆ ಹೋಗಿ ಚೆರ್ಚೆ ಮಾಡಬಹುದು.

ಶ್ರೀ ಬಿ. ರಾಚಯ್ಯ.—ಕಳ್ಳತನ ಆಗಿರತಕ್ಕದ್ದು ೧೬ ಶಸ್ತ್ರಾಸ್ತ್ರಗಳಲ್ಲ. ಮೂರು ರಿವಾಲ್ವಾರ್‌ಗಳು ಮೂರು ಗನ್‌ಗಳು ಆಗಿವೆ. 3 revolvers and 3 SBC guns have been recovered. A case at Brahamapura Police Station Criminal case No. 165/85 under section 409 was taken on file on 24-4-1985. 2 accused persons were arrested – Rama Rao s/o Babu Rao Chindurkar and Hanumantha Rao.....

ಶ್ರೀ ಎಸ್. ಕೆ. ಕಾಂತಾ.—ಮೂರು ರಿವಾಲ್ವಾರ್ ಮತ್ತು ಬಂದೂಕುಗಳು ಹೋಗಿವೆ ಎಂದು ಹೇಳಿದ್ದಾರೆ. ಯಾರು ಅದನ್ನು ಒಯ್ದರು ಅವರ ಮೇಲೆ ಕೇಸ್ ಹಾಕಿದ್ದಾರೆಯೇ ? ಯಾರು ಪರ್ಚೇಸ್ ಮಾಡಿದ್ದಾರೆ ಅವರ ಮೇಲೆ ಹಾಕಿದ್ದೀರಾ ? ಇದರ ಬಗ್ಗೆ ವಿವರಣೆ ಕೊಡಬೇಕು.

ಶ್ರೀ ಬಿ. ರಾಚಯ್ಯ.—ಸೀಜ್ ಮಾಡಿದ ವೆಪನ್ಸ್‌ನ್ನು ಸ್ಟೋರ್‌ನಲ್ಲಿ ಇಟ್ಟಿದ್ದರು. ಅದನ್ನು ನೋಡಿಕೊಳ್ಳುವುದಕ್ಕೆ ರಾಮರಾವ್ ಎಂಬುವವರನ್ನು ಉಸ್ತುವಾರಿಯಲ್ಲಿಟ್ಟಿದ್ದರು ಅವರು ಮಾಡಿದ್ದಾರೆ ಎಂಬುದು ತನಿಖೆಯಿಂದ ತಿಳಿದುಬಂದಿದೆ. ಅದಕ್ಕೋಸ್ಕರ ಅವರ ಮೇಲೆ ಕೇಸ್ ಹಾಕಿದ್ದಾರೆ. ಇನ್ನೊಬ್ಬರು ಸಿದ್ಧರಾಮಪ್ಪ ಎಂಬುವವರು.

ಶ್ರೀ ಆರ್. ಎನ್. ನಾಯಕ್.—ಸಿದ್ದರಾಮಪ್ಪ ಎಂದರೆ ಮಂತ್ರಿಗಳೆ ?

ಶ್ರೀ ಬಿ. ರಾಚಯ್ಯ.—ಸಿದ್ಧರಾಮಪ್ಪ ಎಂಬುವವರು.....

ಶ್ರೀ ಎಸ್. ಕೆ. ಕಾಂತಾ.—ಬಂದೂಕನ್ನು ಯಾರಿಗೆ ಮಾರಿದ್ದಾರೋ ಅವರ ಮೇಲೆ ಕೇಸ್ ಹಾಕಿದ್ದೀರಾ ?

ಶ್ರೀ ಬಿ. ರಾಚಯ್ಯ.—ಇಬ್ಬರನ್ನೂ ಅರೆಸ್ಟ್ ಮಾಡಿದ್ದಾರೆ ಎಂದು ವರದಿ ಇದೆ.

ಅಧ್ಯಕ್ಷರು.—ತಾವು, ಅವರನ್ನು ನಿಮ್ಮ ಛೇಂಬರಿಗೆ ಕರೆಸಿಕೊಂಡು ಮಾಹಿತಿ ಕೊಡಿ.

ಶ್ರೀ ಆರ್. ಎನ್. ನಾಯಕ್.—ಅವರನ್ನು ಕರೆಸಿಕೊಂಡು ಒಳಗಡೆ ಹೇಳಿ ಎಂದರೆ ಬೇರೆಯವರಿಗೆ ಗೊತ್ತಾಗುವುದು ಹೇಗೆ ? ವಿಚಾರ ರಾಜ್ಯಕ್ಕೆ ಗೊತ್ತಾಗಬೇಕು.

ಅಧ್ಯಕ್ಷರು.—ಈ ಕಾಲ್ ಅಟೆನ್‌ಷನ್ ಸಂಬಂಧಪಟ್ಟ ಸದಸ್ಯರಿಗೆ ಮಾತ್ರ ಸಂಬಂಧಪಟ್ಟಿದ್ದು. ನೀವು ಕೇಳುವಹಾಗಿಲ್ಲ. ಮಾನ್ಯ ಸದಸ್ಯರ ಹಿತದೃಷ್ಟಿಯಿಂದ ಹೇಳುತ್ತಿದ್ದೇನೆ ಮಂತ್ರಿಗಳ ಜೊತೆ ಕುಳಿತು ಮಾತನಾಡಿ ವಿಚಾರ ತಿಳಿದುಕೊಳ್ಳಿ ಎಂದು.

ಶ್ರೀ ಬಿ. ರಾಚಯ್ಯ.—ಸೀಜ್ ಮಾಡಿರತಕ್ಕ ರಿವಾಲ್ವಾರ್ ಮತ್ತು ಗನ್‌ಗಳನ್ನು ಮಾರಿರತಕ್ಕದ್ದು ನಾಲ್ಕು ವರ್ಷಗಳ ಹಿಂದೆ. ಅದು ಈಚೆಗೇ ಬಂದಿರಲಿಲ್ಲ. ಅದು ಈಚೆಗೇ ಬೆಳಕಿಗೆ ಬಂದಿದೆ. ನಾವು ಓಡಿದು ಕೇಸ್ ಹಾಕುತ್ತಿದ್ದೇವೆ ಎಂದು ಹೇಳುತ್ತಿದ್ದೇನೆ. ಇವರು (ವಿರೋಧ ಪಕ್ಷದವರಿಗೆ) ಹಿಂದೆ ಮಾಡಿರುವುದಕ್ಕೆಲ್ಲಾ ನಮ್ಮನ್ನೇ ಹೊಣೆ ಮಾಡುವುದಕ್ಕೆ ಪ್ರಯತ್ನ ಪಡುತ್ತಾರೆ.

ಶ್ರೀ ಆರ್. ಎನ್. ನಾಯಕ್.—ಇಲ್ಲ.

ಅಧ್ಯಕ್ಷರು.—ಡಿಮ್ಯಾಂಡ್ ವೇಲೆ ಮಾತನಾಡುವಾಗ ಚೆನ್ನಾಗಿ ಮಾತನಾಡಿ. ಈಗ ಕುಳಿತು ಕೊಳ್ಳಿ.

ಶ್ರೀ ಎಸ್. ಕೆ. ಕಾಂತಾ.—ಅಲ್ಲಿ ಸೆಂಟ್ರಿ ಇರುತ್ತಾರೆ. ಅಧಿಕಾರಿಗಳು ಇರುತ್ತಾರೆ. ೮೦ರಷ್ಟು ಆಪರ್ಸ್ ಕಳುವಾಗುತ್ತಿದೆ ಎಂದರೆ ಇದು ಹೇಗಾಗುತ್ತಿದೆ ಎಂಬುದನ್ನು ವಿಚಾರ ಮಾಡಬೇಕಾದುದು ಅಗತ್ಯ. ಯಾವರೀತಿ ವಿಚಾರಣೆ ಮಾಡುತ್ತೀರಿ ಎಂಬುದನ್ನು ಹೇಳಿ.

ಶ್ರೀ ಬಿ. ರಾಚಯ್ಯ.—ಇದು ಗಂಭೀರವಾದ ವಿಚಾರ. ಎನ್‌ಕ್ವೈರಿ ಮಾಡಿಸಿ ತಪ್ಪಿತಸ್ಥರನ್ನು ಶಿಕ್ಷೆ ಮಾಡುವುದಕ್ಕೆ ಎಲ್ಲ ರೀತಿಯ ಕ್ರಮಗಳನ್ನೂ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು.—ನಿಮ್ಮ ಹತ್ತಿರ ಏನು ಇನ್‌ಫರ್ಮೇಷನ್ ಇದ್ದರೂ ಪಾಸ್‌ಆನ್ ಮಾಡಿ.

(ii) ಎಸ್.ಸಿ. ಮತ್ತು ಎಸ್.ಟಿ. ಎಂ.ಬಿ.ಬಿ.ಎಸ್. ಪದವೀಧರರ ಹುದ್ದೆಯಂನ್ನು ಖಾಯಂಗೊಳಿಸುವ ಬಗ್ಗೆ

SRI B. BASAVALINGAPPA.—Sir, I call the attention of the Minister for Health to the regularisation of the services of M.B.B.S. Graduates belonging to SC and ST.

ಶ್ರೀ ಎಚ್. ಎಲ್ ತಿಮ್ಮೇಗೌಡ (ಆರೋಗ್ಯ ಮಂತ್ರಿಗಳು).—ಈಗ ಹಾಲಿ ೩೧೦ ಮಂದಿ ಎಂ. ಬಿ ಬಿ. ಎಸ್. ಪದವೀಧರರು ಸ್ಥಳೀಯ ಅಭ್ಯರ್ಥಿಗಳಾಗಿ (ಸಹ ಶಸ್ತ್ರ ಚಿಕಿತ್ಸಕ ಹಾಗೂ ಸಹಾಯಕ ವೈದ್ಯಾಧಿಕಾರಿ) ಸರ್ಕಾರಿ ಸೇವೆಯಲ್ಲಿದ್ದಾರೆ. ಇವರಲ್ಲಿ ೧೪೮ ಮಂದಿ ಅನುಸೂಚಿತ ಜಾತಿ ಮತ್ತು ೫೫ ಮಂದಿ ಅನುಸೂಚಿತ ಪಂಗಡಗಳಿಗೆ ಸೇರಿದವರಾಗಿದ್ದಾರೆ. ಈ ೩೧೦ ಮಂದಿಯಲ್ಲಿ ೨೧ ಜನರು ರೆಗುಲರ್ ವೇತನದಲ್ಲಿ ಕೆಲಸಮಾಡುತ್ತಿದ್ದಾರೆ. ಮಿಕ್ಕ ೨೮೯ ಜನರು ನಿಗದಿ ಪಡಿಸಿದ ರೂ. ೧೧೯೦-೦೦ ಸಂಚಿತ ವೇತನ ಪಡೆಯುತ್ತಿದ್ದಾರೆ. ಈ ೨೮೯ ವೈದ್ಯರ ಸೇವೆಯನ್ನು ಪ್ರತಿ ೯ ತಿಂಗಳಿಗೊಮ್ಮೆ ಮುಂದುವರಿಸಲಾಗುತ್ತಿದೆ. ಇವರಲ್ಲಿ ಮಾಮೂಲಿವೇತನ ಪಡೆಯುತ್ತಿದ್ದು ಕೆಲವರು ೭ ವರ್ಷದಿಂದ ಹಾಗೂ ಕೆಲವರು ೨೦ ವರ್ಷದಿಂದ ಈ ಹಂಗಾಮಿ ಕೆಲಸದಲ್ಲಿ ಇದ್ದಾರೆ. ಕನ್‌ಸಾಲಿಡೇಟೆಡ್ ವೇತನ ಪಡೆಯುತ್ತಿರುವವರು ೩ ವರ್ಷದಿಂದ ೭ ವರ್ಷಗಳವರೆಗೆ ಈ ಹಂಗಾಮಿ ಕೆಲಸದಲ್ಲಿ ಕರ್ತವ್ಯ ನಿರತರಾಗಿದ್ದಾರೆ.

ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ೩೪ ಮಂದಿ ಸ್ಥಳೀಯ ಉಪನ್ಯಾಸಕರು ಇದ್ದಾರೆ. ಇವರಲ್ಲಿ ೧೬ ಜನ ಪರಿಶಿಷ್ಟ ಜಾತಿ ಮತ್ತು ಒಬ್ಬರು ಪರಿಶಿಷ್ಟ ವರ್ಗದವರಿದ್ದಾರೆ.

ಈಗಾಗಲೇ ಇವರ ಕೆಲಸವನ್ನು ಖಾಯಂಗೊಳಿಸುವ ವಿಷಯ ಪರಿಶೀಲನೆಯಲ್ಲಿದೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಮಂತ್ರಿಗಳು ಉತ್ತರದಲ್ಲಿ ಹೇಳಿದ ಪ್ರಕಾರ ಮೂರು ವರ್ಷಗಳಿಂದ ೨೦ ವರ್ಷಗಳ ಪರ್ಯಂತ ಹಂಗಾಮಿಯಾಗಿ ಕೆಲಸ ಮಾಡತಕ್ಕ ಡಾಕ್ಟರುಗಳು ಈ ಇಲಾಖೆಯಲ್ಲಿದ್ದಾರೆ ಎಂಬುದನ್ನು ಒಪ್ಪಿಕೊಂಡಿದ್ದಾರೆ. ಇಷ್ಟು ದಿವಸಗಳ ಪರ್ಯಂತ ರೆಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ಮುಂದುವರೆಸುವುದಕ್ಕೆ ನಮಗೆ ಅಧಿಕಾರ ಇದೆಯೋ ಇಲ್ಲವೇ ಎಂಬುದನ್ನು ತಿಳಿಸಬೇಕು. ಎರಡನೆಯದಾಗಿ ಇಲಾಖೆಯಲ್ಲಿ ಡಾಕ್ಟರುಗಳ ಹುದ್ದೆಗಳು ಎಷ್ಟಿವೆ ? ಅದರಲ್ಲಿ ಅನುಸೂಚಿತ ಜಾತಿಗೆ ಸೇರಿರತಕ್ಕವರು ಎಷ್ಟು ಮಂದಿ ನೇಮಕವಾಗಿದ್ದಾರೆ ? ಮೂರನೆಯದು, ಖಾಲಿ ಹುದ್ದೆಗಳು ಇಲಾಖೆಯಲ್ಲಿ ಇವತ್ತು ಎಷ್ಟಿವೆ ? ೧೯೭೮ನೇ ಇಸವಿಯಲ್ಲಿ